# ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆ

**ಭಾರತಿ ಎಸ್. ಗದ್ದಿ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಎಸ್.ಎಸ್.ಎಮ್.ಎಸ್., ಮಹಾವಿದ್ಯಾಲಯ, ಅಥಣಿ.

DOI: https://doi.org/10.5281/zenodo.16677612

## ABSTRACT:

ಪರಿಸರದ ಕುರಿತಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರು ಪರಿಸರದ ಬಗೆಗಿನ ಕುತೂಹಲ, ವಿಸ್ಮಯ, ತಮ್ಮ ಅನುಭವಗಳನ್ನು ಕಥೆ, ಕಾದಂಬರಿಗಳಲ್ಲಿ ನಿರೂಪಿಸಿದ್ದಾರೆ. ತಮ್ಮ ಬಾಲ್ಯದಿಂದ ಕೃಷಿ ಆರಂಭಿಸಿದ ದಿನಗಳವರೆಗೆ ಪರಿಸರದೊಂದಿಗಿನ ತಮ್ಮ ಸಂಬಂಧವನ್ನು ಹಂಚಿಕೊಂಡಿದ್ದಾರೆ. ಅವರ ಪರಿಸರ ಕಥೆ, ಕಾದಂಬರಿಗಳಲ್ಲಿ ಪಾತ್ರಗಳು ಓದುಗರಿಗೆ ಹತ್ತಿರವಾಗುತ್ತವೆ. ಈ ಕೃತಿಯು 'ಪ್ರಕೃತಿಯು ನಮ್ಮ ಬದುಕಿನ ಭಾಗ ಮಾತ್ರವಲ್ಲ, ನಾವು ಪ್ರಕೃತಿಯ ಒಂದು ಭಾಗ' ಎಂಬುದು ಒತ್ತಿ ಹೇಳಿದೆ.

ಮಲೆನಾಡಿನ ಐಸಿರಿಯನ್ನು ವರ್ಣಿಸಿದ ಕನ್ನಡದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ಮಹತ್ವದ ಕೊಡುಗೆ ನೀಡಿದ ಕತೆಗಾರ, ಕಾದಂಬರಿಕಾರ, ಅಂಕಣಕಾರ, ಕೃಷಿಕರು ಮತ್ತು ವಿಶಿಷ್ಟ ಚಿಂತಕರು. ತಮ್ಮ ಬದುಕು-ಬರಹಗಳಿಂದ ಜನಮನ ಗೆದ್ದವರು. ಪರಿಸರ ಇವರ ಉಸಿರು. ನಿಸರ್ಗ ಇವರು ಆರಾಧಿಸುವ ದೇವರು. "ಮಾನವನಿಗೆ ಪ್ರಕೃತಿಯ ಅಗತ್ಯವಿದೆ ಹೊರತು ಪ್ರಕೃತಿಗೆ ಮಾನವನ ಅಗತ್ಯವಿಲ್ಲ" ಎಂಬ ಮಹೋನ್ನತ ಸಂದೇಶವನ್ನು ಸಾರಿದ ಕನ್ನಡದ ಪರಿಸರ ಪ್ರೇಮಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಕನ್ನಡದ ಅಪರೂಪದ ಬರಹಗಾರರು.

## KEYWORDS:

ಪರಿಸರ, ಪಜ್ಞೆ, ಸಾಹಿತ್ಯ, ತೇಜಸ್ವಿ, ಜುಗಾರಿಕ್ರಾಸ್, ಕಾಡಿನ ಕಥೆಗಳು.

ಮಲೆನಾಡಿನ ರಸಋಷಿಯಾಗಿ ವಿಶ್ವ ಮಾನವನಾಗಿ ಮೆರೆದ ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪರಿಸರ ಪ್ರಜ್ಞೆಯನ್ನು ಬೆಳೆಸಿದ್ದಾರೆ. ಅದೇ ರೀತಿಯಲ್ಲಿ ಬೇಂದ್ರೆ, ಜಿ.ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ, ಯಶವಂತ ಚಿತ್ತಾಲರ, ಲಂಕೇಶರ ಕೃತಿಗಳಲ್ಲಿ ಮೂಡಿಬಂದ ಸಾಮಾಜಿಕ ಪರಿಸರ ಮತ್ತು ಅದರೊಡನೆ ಸೆಣಸಾಡುವ ಮನುಷ್ಯ ಪ್ರಜ್ಞೆ, ಶಿವರಾಮ ಕಾರಂತರ 'ಚೋಮನ ದುಡಿ', ದೇವನೂರ ಮಹಾದೇವರ 'ಕುಸುಮಬಾಲೆ' ಮೊದಲಾದವುಗಳಲ್ಲಿ ಪರಿಸರ ಪ್ರಜ್ಞೆ ಎದ್ದು ಕಾಣುತ್ತದೆ. ಇಂತಹ ಸಾಹಿತಿಗಳ ಸಾಲಿನಲ್ಲಿ ವಿಶಿಷ್ಟವಾಗಿ ಮತ್ತು ವಿಭಿನ್ನವಾಗಿ ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಂಡು ಸಾಹಿತ್ಯ ರಚಿಸಿದವರು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು.

ತೇಜಸ್ವಿಯವರು ಕನ್ನಡ ಉಪನ್ಯಾಸಕ ವೃತ್ತಿಯನ್ನು ಮಾಡುತ್ತಾ ನಗರ ಜೀವನ ಕಳೆಯಬಹುದಾಗಿತ್ತು. ಆದರೆ ತೇಜಸ್ವಿಯವರು ಮಲೆನಾಡಿನಲ್ಲಿ, ಪರಿಸರದಲ್ಲಿ, ಕೃಷಿ ಕಾಯಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ತೇಜಸ್ವಿಯವರು ಗ್ರಾಮೀಣ ಪ್ರದೇಶದ ಅನುಭವಗಳನ್ನು ಪಡೆಯುತ್ತಾ, ಪರಿಸರದೊಂದಿಗೆ ಬದುಕು ಮಾಡುತ್ತಾ, ಪ್ರಕೃತಿಯ ಕೇವಲ ಆರಾಧಕರಾಗಿರದೆ ಅದರಲ್ಲಿನ ನಿಗೂಢ ಸತ್ಯಗಳ ಶೋಧಕರಾಗಿದ್ದಾರೆ. ವೈಜ್ಞಾನಿಕ ದೃಷ್ಟಿಕೋನದಿಂದ ಪ್ರಕೃತಿಯ ರಹಸ್ಯಗಳನ್ನು ಅನಾವರಣಗೊಳಿಸಿ ತಮ್ಮ ಚಿಂತನೆಯ ರಸವನ್ನು ಸಾಹಿತ್ಯವಾಗಿಸಿದ್ದಾರೆ. ಗ್ರಾಮೀಣ ವರ್ಗದ ಸಮಸ್ಯೆಗಳನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸುವ ಮೂಲಕ ಕೃಷಿಕ ವರ್ಗದ ಶ್ರಮ ಜೀವನದ ಅರಿವನ್ನು ಸಾಹಿತ್ಯದಲ್ಲಿ ನಿಜವಾದ ಪರಿಸರ ಪ್ರಜ್ಞೆಯನ್ನು ಬೆಳೆಸಿದವರು ತೇಜಸ್ವಿಯವರು.

ತೇಜಸ್ವಿಯವರ ಬಹುತೇಕ ಕೃತಿಗಳಲ್ಲಿ ಪರಿಸರ ಪ್ರಜ್ಞೆ ಧಾರಾಳವಾಗಿ ಮೂಡಿಬಂದಿದೆ. 'ಸ್ವರೂಪ', 'ನಿಗೂಢ ಮನುಷ್ಯರು' ಎಂಬ ಸೃಜನಶೀಲ ಕೃತಿಗಳಿಂದ ಹಿಡಿದು "ಕಾಡಿನ ಕಥೆಗಳು" ಎಂಬ ಸೃಜನೇತರ ಸಾಹಿತ್ಯದವರೆಗೂ ಇವರ ಪರಿಸರ ಪ್ರಜ್ಞೆ ಕಂಡುಬರುತ್ತದೆ. ಇದಕ್ಕೆ ಬಹು ಮುಖ್ಯ ಕಾರಣ ಕುವೆಂಪು. ಕುವೆಂಪು ಅವರು ಮಲೆನಾಡಿನಿಂದ ಮೈಸೂರಿಗೆ ಬಂದದ್ದು. ತೇಜಸ್ವಿಯವರು ಮೈಸೂರಿನಿಂದ ಮಲೆನಾಡಿಗೆ ಹೋಗಿ ನೆಲೆಸಿದ ಕಾರಣ ಎಂದರೆ ಅದು ಸರಳ ಮಾತಷ್ಟೇ ಆಗುತ್ತದೆ ಎಂಬುದು ಲೇಖಕರೊಬ್ಬರ ಅಭಿಪ್ರಾಯವಾಗಿದೆ.

ಕುವೆಂಪು ಮತ್ತು ತೇಜಸ್ವಿಯವರಲ್ಲಿ ಪರಿಸರ ಪ್ರಜ್ಞೆಯ ಚಿಂತನೆಗಳು ಭಿನ್ನ ಭಿನ್ನವಾಗಿದ್ದರೂ ಕೂಡ ಅವುಗಳು ಪರಿಸರಕ್ಕೆ ತಕ್ಕಂತೆ ಬೆಳೆದುಬಂದಿವೆ. ಉದಾಹರಣೆಗೆ: ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗುತ್ತಿಯ ನಾಯಿಗೆ ಇಡುವ ಹೆಸರು 'ಹುಲಿಯ' ಎಂದಾದರೆ, ತೇಜಸ್ವಿಯವರು

'ಕರ್ವಾಲೋ' ಕಾದಂಬರಿಯಲ್ಲಿ ಬರುವ ಒಂದು ಪಾತ್ರವಾಗಿ ಕಂಡಿರುವ ನಾಯಿಗೆ ಇಟ್ಟಿರುವ ಹೆಸರು 'ಕಿವಿ' ಎಂದು. ಹೀಗೆ ಕುವೆಂಪು ಮತ್ತು ತೇಜಸ್ವಿಯವರ ಪರಿಸರ ಪ್ರಜ್ಞೆ ಬೆಳೆದು ಬಂದಿರುವುದನ್ನು ಗಮನಿಸಬಹುದು.

ತೇಜಸ್ವಿಯವರ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಗಳ ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ. ತೇಜಸ್ವಿಯವರ 'ಕರ್ವಾಲೋ' ಸಹಜ ಸುಂದರ ಕಾದಂಬರಿ. ಮೂಡಿಗೆರೆ–ಕುಪ್ಪಳ್ಳಿಯ ನಡುವೆ ಓಡಾಡುತ್ತಲೇ ಕಂಡುಕೊಂಡ ಅನುಭವಗಳನ್ನು ಕಥಾರೂಪದಲ್ಲಿ ಹೆಣೆದ ರೀತಿ ಸಹೃದಯನಿಗೆ ವಿಸ್ಮಯದ ಜ್ಞಾನಲೋಕವನ್ನು ಪರಿಚಯಿಸುತ್ತದೆ. 'ಕರ್ವಾಲೋ' ಎಂಬುವವನು ಮೂಲತಃ ಪರಿಸರ ಮತ್ತು ಕೃಷಿ ತಜ್ಞ. ಮೂಡಿಗೆರೆಯ ಏಕೈಕ ಗೆಜೆಟೆಡ್ ಆಫೀಸರ್. ಮತ್ತು ಕುವೆಂಪುರವರು ಮೈಸೂರಿನಲ್ಲಿದ್ದಾಗ ತೇಜಸ್ವಿಯವರಿಗೆ ಜೇನುತುಪ್ಪ ಕಳಿಸಲು ಪತ್ರ ಬರೆಯುತ್ತಾರೆ. ಆಗ ತೇಜಸ್ವಿಯವರು ತಂದೆಯ ಪತ್ರಕ್ಕೆ ಕ್ರಿಯಾತ್ಮಕವಾಗಿ ಪ್ರತಿಕ್ರಿಯಿಸಲು ಮೂಡಿಗೆರೆಯ ಜೇನುಹುಳು ಸಾಕಾಣಿಕೆ ಮತ್ತು ಸಲಹಾ ಕೇಂದ್ರಕ್ಕೆ ಭೇಟಿ ನೀಡುತ್ತಾರೆ. ಅಲ್ಲಿಂದ ತೇಜಸ್ವಿಯವರು ತಮ್ಮ ಸುತ್ತಲು ದಿನನಿತ್ಯ ಕಾಣಿಸುತ್ತಿದ್ದ ಜೇನುಗೂಡಿಗೆ ಸಂಬಂಧಿಸಿದ, ತಮಗೆ ತಿಳಿಯದ ಅನೇಕ ಕುತೂಹಲಕಾರಿ ಸಂಗತಿಗಳನ್ನು ವಿಶ್ಲೇಷಿಸುತ್ತಾರೆ. ಇಲ್ಲಿ ತೇಜಸ್ವಿಯವರೇ ನಿರೂಪಕರಾಗಿ, ಪ್ಯಾರಾ ಎನ್ನುವ ಅಡುಗೆ ಸಹಾಯಕನಾದ ಮುಸ್ಲಿಂ ಹುಡುಗ, ಕಿವಿ ಎನ್ನುವ ಸಾಕು ನಾಯಿ, ಕರ್ವಾಲೊ ಎಂಬ ಗೆಜೆಟೆಡ್ ಆಫೀಸರ್, ಮಂದಣ್ಣನೆಂಬ ಮುಗ್ಧ ಹುಡುಗ ಹೀಗೆ ಮುಖ್ಯವಾದ ಪಾತ್ರಗಳೊಂದಿಗೆ ಕಥೆ ಜೇನುಹುಳುವಿನ ಕುತೂಹಲಕಾರಿ ಸಂಗತಿಗಳ ಅಖಂಡ ಜಗತ್ತನ್ನು ಪರಿಚಯಿಸಿದ್ದಾರೆ.

ತೇಜಸ್ವಿಯವರ 'ಜುಗಾರಿಕ್ರಾಸ್' ಪತ್ತೇದಾರಿ ಕಾದಂಬರಿಯಾದರೂ ಕೂಡ ಮಲೆನಾಡಿನ ಒಬ್ಬ ಕೃಷಿಕ ದಂಪತಿಗಳ ಸ್ವಾರಸ್ಯಕರ ಕಥೆಯನ್ನೊಳಗೊಂಡಿದೆ. ಸಂಪೂರ್ಣ ಕೃತಿಯು ಮಲೆನಾಡಿನ ಆಡುಭಾಷೆಯಲ್ಲೇ ಬರೆಯಲ್ಪಟ್ಟಿದ್ದು ಓದುಗರಿಗೆ ಬಹಳ ಮನರಂಜನೆಯನ್ನು ಕೊಡುತ್ತದೆ. ಪೂರ್ಣಚಂದ್ರ ತೇಜಸ್ವಿಯವರು ಮಲೆನಾಡಿನ ಜೀವನ, ಪರಿಸರ ಹಾಗೂ ಅಲ್ಲಿನ ಕಷ್ಟ–ಸುಖಗಳನ್ನು ಬಹಳ ಸೊಗಸಾಗಿ ವರ್ಣಿಸಿದ್ದಾರೆ. ಕಥೆಯು ಕಾಲ್ಪನಿಕವಾದರೂ, ನೈಜತೆಗೆ ಬಹಳ ಹತ್ತಿರವಾಗಿದೆ. ಮಲೆನಾಡಿನ ದಟ್ಟ ಕಾಡುಗಳಲ್ಲಿ ಬದುಕುತ್ತಿರುವ ಜನರ ಜೀವನದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಈ ಕೃತಿಯಲ್ಲಿ ಚಿತ್ರಿಸಲಾಗಿದೆ. ಈ ಕೃತಿ ಮಲೆನಾಡಿನಲ್ಲಿ ನಡೆಯುತ್ತಿರುವ ಅರಣ್ಯನಾಶದ ಬಗ್ಗೆಯೂ ಬೆಳಕು ಚೆಲ್ಲುತ್ತದೆ. ತೇಜಸ್ವಿಯವರಿಗೆ ಮರಗಳೆಂದರೆ ಜೀವ. 'ಅರಣ್ಯಗಳ ಉಳಿವೇ ನಾಡಿನ ಉಳಿವು' ಈ ಸತ್ಯ ಅರಿತು ನಾವು ಪ್ರತಿಯೊಬ್ಬರು ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಬೇಕು ಎನ್ನುವುದನ್ನೇ 'ಜುಗಾರಿಕ್ರಾಸ್' ಕಥೆಯೊಂದಿಗೇನೆ ಹೇಳುತ್ತಾ ಹೋಗಿದ್ದಾರೆ.

ತೇಜಸ್ವಿಯವರು ಪರಿಸರ ಉಳಿಸುವ ಪರಿಸರದ ಕತೆಗಳಿಗೇನು ಕಡಿಮೆಯಿಲ್ಲ. ಈ ಕತೆಗಳು ಅವರ ಕಲ್ಪನೆಯಲ್ಲಿ ಹುಟ್ಟಿದ ಕಥೆಗಳಲ್ಲ. ಬದಲಾಗಿ ಮಲೆನಾಡಿನ ಪರಿಸರ ಅವರ ಮೇಲೆ ಬೀರಿದ ಪ್ರಭಾವದಿಂದ ಜನ್ಮತಳೆದ ಅನುಭವದ ಕಥೆಗಳು. ತೇಜಸ್ವಿಯವರು ತಮ್ಮ ಬಾಲ್ಯ ಮತ್ತು ಕೃಷಿ ಆರಂಭಿಸಿದ ದಿನಗಳಲ್ಲಿ ಪರಿಸರದಲ್ಲಿ ಕಂಡ ಕುತೂಹಲ, ವಿಸ್ಮಯ, ಅನುಭವಗಳನ್ನು ವಿವರಿಸುತ್ತಾರೆ. 'ಮಾನೀಟರ್', 'ಕಿವಿಯೊಡನೆ ಒಂದು ದಿನ', 'ಮಾಸ್ತಿ ಮತ್ತು ಭೈರ', 'ಸುಸ್ಮಿತ ಮತ್ತು ಹಕ್ಕಿಮರಿ', 'ಎಂಗ್ಟನ ಪುಂಗಿ', 'ಸಂಬಳಕ್ಕೆ ಸಿಕ್ಕಿಕೊಂಡ ದೆವ್ವ', 'ಕುಕ್ಕುಟ ಪಿಶಾಚಿ', 'ಕಾಳಪ್ಪನ ಕೋಬ್ರ', 'ಕೆರೆಯ ದಡದಲ್ಲಿ', 'ಗಾಡ್ಲಿ', 'ಪರಿಸರದ ಕತೆ', 'ಮೂಲಿಕೆಯ ಬಳ್ಳಿಯ ಸುತ್ತ', 'ಪ್ಯಾರಾನಿಗೆ ಸೈತಾನ್ ಕಾಟ', 'ಆವಾಂತರದ ಸೀನಪ್ಪ' ಇವೇ ಹದಿನಾಲ್ಕು ಕತೆಗಳು. ಪ್ರತಿಯೊಂದು ಕಥೆಯು ಮಲೆನಾಡಿನ ಪರಿಸರದ ವಿಸ್ಮಯತೆಗಳನ್ನು ಒಮ್ಮೊಮ್ಮೆ ತಮಾಷೆಯಾಗಿ, ಮತ್ತೊಮ್ಮೆ ಗಂಭೀರವಾಗಿ ಓದುಗರಿಗೆ ಮುಟ್ಟಿಸುತ್ತವೆ. ಇಲ್ಲಿರುವ ಪ್ರತಿ ಅಂಶಗಳು ಅಷ್ಟೇನೂ ಹೊಸ ಪ್ರಾಣಿಗಳಿಗೆ ಸಂಬಂಧಿಸಿಲ್ಲವಾದರೂ ಅವುಗಳ ವಿಶೇಷತೆಗಳನ್ನು ಬಿತ್ತರಗೊಳಿಸುತ್ತವೆ. ತೇಜಸ್ವಿಯವರ ವಿಶಿಷ್ಟ ಶೈಲಿಯಿಂದ ನಿರೂಪಿಸಿದ ಮಾರ, ಪ್ಯಾರ, ಕಿವಿ ಎಂಬ ಸಾಕುನಾಯಿ, ಎಂಗ್ಟ, ಮಾಸ್ತಿ, ಭೈರ, ಸುಸ್ಮಿತ, ಗಾಡ್ಲಿ, ಸೀನಪ್ಪ ಮುಂತಾದ ಪಾತ್ರಗಳು ನಮಗೂ ಆಪ್ತವಾಗುತ್ತ ಹೋಗುತ್ತವೆ. 'ಪ್ರಕೃತಿಯೆಂದರೆ ನಮ್ಮ ಬದುಕಿನ ಭಾಗವಲ್ಲ, ನಾವು ಪ್ರಕೃತಿಯ ಒಂದು ಭಾಗ' ಎಂಬ ತೇಜಸ್ವಿಯವರ ಮಾತಿಗೆ 'ಪರಿಸರದ ಕತೆ' ಉತ್ತಮ ಉದಾಹರಣೆ.

'ಎಂಗ್ಟನ ಪುಂಗಿ' ಕಥೆಯೂ ತೇಜಸ್ವಿಯವರ ಪ್ರಮುಖ ಕಥೆಗಳಲ್ಲಿ ಒಂದು. ತಮ್ಮ ಪರಿಸರಕ್ಕೆ ಬರುವ ಪಶು, ಪಕ್ಷಿ, ಕ್ರಿಮಿ, ಕೀಟ, ಮರ, ಬಳ್ಳಿ, ಸಸ್ಯ, ಮನುಷ್ಯ ಮುಂತಾದವನ್ನು ಸಾಹಿತ್ಯದ ಮುಖೇನ ಅವರು ಅನ್ವೇಷಣೆಗೆ ಗುರಿ ಮಾಡುತ್ತಾರೆ. 'ಎಂಗ್ಟನ ಪುಂಗಿ' ಕಥೆಯಲ್ಲಿಯೂ ಎಂಗ್ಟ ಮತ್ತು ಆತನ ಹೆಂಡತಿ ಸಾವಿಗೆ ಆತನು ಸಾಕಿಕೊಂಡ ಹಾವುಗಳೇ ಕಾರಣವಾಗಿದ್ದು, ತೇಜಸ್ವಿಯವರು 'ಪರಿಸರಕ್ಕೆ ವಿರುದ್ಧವಾಗಿ ಮಾನವನು ಎಂದೂ ಬದುಕಲು ಪ್ರಯತ್ನಿಸಬಾರದು. ಇದು ಅವರ ವಿನಾಶಕ್ಕೆ ಕಾರಣ' ಎಂಬ ಗಂಭೀರ ವಿಷಯವನ್ನು ಇದರೊಳಗೆ ಅರಿವಿಲ್ಲದೇ ಪ್ರಸ್ತಾಪಿಸಿದ್ದಾರೆ. ಎಂಗ್ಟನ ಸಾವಿನ ನಂತರ ಸಂಬಂಧಿಕನೆಂದು ಹೇಳಿಕೊಂಡು ಬಂದಿದ್ದ ವ್ಯಕ್ತಿಗೆ ತೇಜಸ್ವಿ "ನಮಗೆ ಹಾವಿನ ಔಷಧಿ ಕೊಡುವ ನೀವೇ ನಿಮ್ಮ ಪ್ರಾಣ ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲವಲ್ಲ" ಎಂದು ಪ್ರಶ್ನಿಸಿದಾಗ ಆ ವ್ಯಕ್ತಿಯ ಬಾಯಿಂದ ಹೊರಡುವ ಮಾತು ಗಂಭೀರ ಸತ್ಯವನ್ನು ಪರಿಚಯಿಸುತ್ತದೆ. "ಎರಡು ಬೆರಳಿನ ಸಂದಿಗೆ ಹಾವು ಕಚ್ಚಿದರೆ ಆತನನ್ನು ಸಾವಿನಿಂದ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ" ಎಂಬುದು ಅಲ್ಲದೆ, ಕೊಳಕುಮಂಡಲ ಹಾವು ಕಚ್ಚಿದರೆ ಮನುಷ್ಯ ಸಾಯುವುದಿಲ್ಲವಾದರೂ ಆತನ ಕಾಲುಗಳು ಕೆಲವೇ ದಿನಗಳಿಗೆ ಕೊಳೆಯಲು ಪ್ರಾರಂಭಿಸುತ್ತವೆ. ಹೀಗೆ ಕಥೆಯು

ಸಹೃದಯರಿಗೆ ಆಸಕ್ತಿ ಕೆರಳಿಸಿ ಓದಿಸಿದರೂ ಅದರೊಳಗಿನ ಇಂತಹ ಗಂಭೀರ ವಿಷಯಗಳು ಪರಿಸರದ ವಿಶಿಷ್ಟ ವಿನ್ಯಾಸವನ್ನು ಪರಿಚಯಿಸುತ್ತವೆ.

'ಕುಕ್ಕುಟ ಪಿಶಾಚಿ' ಎಂಬ ಕತೆಯಲ್ಲಿ ಪಕ್ಷಿಯೊಂದರ ವಿಶಿಷ್ಟ ವರ್ತನೆ ಪ್ರಸ್ತಾಪವಾಗಿದೆ. ನಿಸರ್ಗದ ಪ್ರತಿ ಪ್ರಾಣಿಯು ತನ್ನ ಸಂತತಿಯ ಮರಿಗಳನ್ನು ಸಂರಕ್ಷಿಸಲು ಪ್ರಾಣ ಪಣಕ್ಕಿಡುತ್ತವೆ. ಆ ಬಗೆಗೆ ಅವುಗಳಿಗೆ ಅತೀಯಾದ ಸ್ವಾರ್ಥ ಮತ್ತು ಧೈರ್ಯ ಬಂದುಬಿಡುತ್ತದೆ. ಮನುಷ್ಯನೂ ಇದಕ್ಕೆ ಹೊರತಾಗಿಲ್ಲ. ಈ ಕತೆಯಲ್ಲಿ ಕಾಡುಕೋಳಿಯೊಂದು ತಾನಿಟ್ಟ ಗೂಡಿನ ಸಮೀಪಕ್ಕೆ ಯಾವೂದೋ ಮನುಷ್ಯನ ಸುಳಿವು ಬಂದರೆ ದೂರದಲ್ಲಿಯೇ ಆ ಮನುಷ್ಯನ ಬಳಿ ತಾನೇ ಹೋಗಿ ನರ್ತನ ಮಾಡಿದಂತೆ ನಟಿಸಿ ಆತನನ್ನು ಅನ್ಯ ದಿಕ್ಕಿನ ಕಡೆಗೆ ಕರೆದುಕೊಂಡು ಹೋಗಿ ಗೂಡಿನಿಂದ ಆತನ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತದೆ. ಇಂತಹ ಪಕ್ಷಿಗಳು ತಾಯ್ತನದ ಹಿರಿಮೆಗೆ ಇಂದಿಗೂ ನಮ್ಮ ಜನಪದರಲ್ಲಿ ದೈವತ್ವದ ಮತ್ತು ದೈವತೆಯ ಸ್ಥಾನ ಪಡೆದುಕೊಂಡಿವೆ.

'ಮೂಲಿಕೆ ಬಳ್ಳಿಯ ಸುತ್ತ' ಎಂಬುದು ಕಾಡಿನಲ್ಲಿನ ಔಷಧೀಯ ಗುಣಗಳಿರುವ ಗಿಡಮೂಲಿಕೆಗಳನ್ನು ಸಂರಕ್ಷಿಸಲು ನಮ್ಮ ಜನಪದರು ಅವುಗಳಿಗೆ ಕಟ್ಟುಕಥೆಗಳನ್ನು ನಿರ್ಮಿಸಿಕೊಂಡು ಅವುಗಳ ರಕ್ಷಣೆಗೆ ಮುಂದಾದದ್ದು. ಈ ಕತೆಯಲ್ಲಿ ಮಾರ (ತೇಜಸ್ವಿಯವರ ಸಹಾಯಕ) ಚಪ್ಪರ ಹೊದಿಸಲು ತಂದಿದ್ದರಲ್ಲಿ ಒಂದು ಬಳ್ಳಿಯನ್ನು ವಿಶಿಷ್ಟವಾಗಿ ಗುರುತಿಸಿ ಅದನ್ನು ಗಿಡವೊಂದಕ್ಕೆ ಕಟ್ಟುತ್ತಾನೆ. ಹಾಗೆ ಕಟ್ಟಲು ಕಾರಣ ಆತನಿಗೂ ತಿಳಿದಿಲ್ಲ. ಆದರೆ ಹಿರಿಯರಿಂದ ಬಂದ ಸಂಪ್ರದಾಯವೆಂದು ಹೇಳಿ ಸುಮ್ಮನಾಗುತ್ತಾನೆ. ಮಾರನ ಸಾವಿನ ನಂತರ ಮತ್ತೊಬ್ಬರ ಮೂಲಕ ಆ ಗಿಡಮೂಲಿಕೆ ಮೌಲ್ಯವಾದಿಗೆ ಔಷಧಿ ಎಂದು ತಿಳಿಯುತ್ತದೆ. ಅಂದರೆ ನಿಸರ್ಗದ ಭಾಗವಾದ ಮನುಷ್ಯ ಮತ್ತು ಆತನೊಂದಿಗೇ ಇರುವ ಜೀವ ಪ್ರಪಂಚಕ್ಕೆ ತೊಂದರೆ ಕೊಡುವ ಯಾವುದೇ ಆರೋಗ್ಯದ ಸಮಸ್ಯೆಯಿದ್ದರೂ ಅದಕ್ಕೆ ಪರಿಹಾರವೂ ಕೂಡಾ ಪರಿಸರದಲ್ಲಿಯೇ ಇದೆ. ಆದರೆ ಅದನ್ನು ಪತ್ತೆ ಹಚ್ಚುವಲ್ಲಿ ಮನುಷ್ಯನ ಚಾಣಾಕ್ಷತನ ಬಹು ಮುಖ್ಯವಾಗುತ್ತದೆ. ಸಾಕು–ಕಾಡು ಪ್ರಾಣಿಗಳು ತಮ್ಮ ಆರೋಗ್ಯದ ಸಮಸ್ಯೆಗೆ ಹೆಚ್ಚಾಗಿ ತಾವುಗಳೇ ಪರಿಹಾರ ಹುಡಿಕಿಕೊಳ್ಳುವುದೊಂದು ವಿಶೇಷ. ಲೇಖಕರೇ ಹೇಳುವಂತೆ "ನನಗೆ ಬಲಗಾಲು ಹಿಮ್ಮಡಿ ಅನೇಕ ದಿನಗಳಿಂದ ನೋಯುತ್ತಿತ್ತು. ಹೆಚ್ಚಿಗೆ ದೂರ ನಡೆದರೆ ಸಾಕು, ಕುಂಟಿಕೊಂಡೇ ನಡೆಯಬೇಕಿತ್ತು. ಇದರೊಡನೆ, ಈಚೆಗೆ ಹಿಮ್ಮಡಿ ಎಲುಬಿನ ಪಕ್ಕ ಒಂದು ದಪ್ಪ ಗಡ್ಡೆ ಎದ್ದಿತ್ತು. ಡಾಕ್ಟರು ಅದನ್ನು ಶಸ್ತ್ರಚಿಕಿತ್ಸೆ ಮಾಡಿ ತೆಗೆಯಬೇಕೆಂದು ಹೇಳಿದ್ದರು. ಆ ಗಡ್ಡೆ ಚೂರು ತಗೊಂಡು, ತಿಂದ ಮೇಲೆ ಎರಡು ದಿನಕ್ಕೆ ನೋಡುತ್ತೇನೆ. ಆ ಗಡ್ಡೆ ಎಲ್ಲಿತ್ತೆಂದು ಪತ್ತೆ ಮಾಡಲಾಗದಂತೆ ಮಂಗಮಾಯವಾಗಿತ್ತು." ಈ ರೀತಿಯ ಜಿಜ್ಞಾಸೆಯನ್ನು ಓದುಗರಲ್ಲೂ ಹುಟ್ಟುಹಾಕುವ

ಈ ಬರಹಗಳು, ಕನ್ನಡ ಸಾಹಿತ್ಯದಲ್ಲೇ ಅನನ್ಯ ಎನ್ನಬಹುದು.

'ಪ್ಯಾರಾನಿಗೆ ಸೈತಾನ್ ಕಾಟ' ಎಂಬ ಕತೆಯಲ್ಲಿ ಓತಿಕ್ಯಾತ, ಇಲಿ, ಹಾವು, ಕರಡಿ, ಅಳಿಲು, ಗೂಬೆ, ಬೆಕ್ಕು ಹೀಗೆ ಹಲವು ಪ್ರಾಣಿಗಳ ಕುರಿತಾಗಿ ಜನಪದರಲ್ಲಿರುವ ಪೌರಾಣಿಕ ನಂಬಿಕೆಗಳನ್ನು ಯಥಾವತ್ತಾಗಿ ಪ್ರಸ್ತಾಪಿಸುತ್ತಾರೆ. ಸತ್ಯವೋ, ನಂಬಿಕೆಯೋ ಒಟ್ಟಿನಲ್ಲಿ ಜನಪದರ ಭಾವನೆಗಳು ಮಾತ್ರ ಅವುಗಳು ಒಂದಿಲ್ಲೊಂದು ಬಗೆಯಲ್ಲಿ ನಮ್ಮೊಂದಿಗೆ ಬಾಂಧವ್ಯ ಹೊಂದಿರಲು ಕಾರಣವಾಗಿವೆ. ಗೂಬೆಯನ್ನು ಸಾಹಿತ್ಯದಲ್ಲಿ ಕಾಡಿನ ವೃದ್ಧ ಮತ್ತು ಜ್ಞಾನಿಯಾಗಿ ವರ್ಣಿಸಲ್ಪಡುವುದೊಂದು ವಿಶೇಷ. ಪ್ಯಾರಾನು ಮೂಲತಃ ಮುಸ್ಲಿಂ ಆಗಿದ್ದು ಓತಿಕ್ಯಾತದ ವಿಷಯದಲ್ಲಿ ಮಾತ್ರ ಅವನು ಧರ್ಮಾಭಿಮಾನಿಯಾಗಿದ್ದ. ಆ ಓತಿಕ್ಯಾತವೇ ಅವನ ಚಡ್ಡಿ ಮತ್ತು ಅಂಗಿಯಲ್ಲಿ ಹೊಕ್ಕು ಆತನ ಬೆವರಿಳಿಸಿದ್ದು, ಬೆತ್ತಲೆ ಮಾಡಿದ್ದು ತಮಾಷೆಯಾಗಿಯೇ ಅದರ ವಿನ್ಯಾಸವನ್ನು ಪ್ರಸ್ತಾಪಿಸುತ್ತದೆ.

'ಲಿಂಗಬಂದ' ಕಥೆ ಭಯವನ್ನು ಸ್ಥಾಯಿಯಾಗಿಸಿಕೊಂಡು ಬೆಳೆದುಬಂದರೂ ಕೂಡ ಅಲ್ಲಿನ ಮುಗ್ಧ ಮಕ್ಕಳ ಅಭೌತಿಕ ಪರಿಸರದ ಕಲ್ಪನೆಯನ್ನು ನಾವು ಕಂಡುಕೊಳ್ಳಬಹುದು. 'ಲಿಂಗಬಂದ' ಕಥೆಯು ಮಲೆನಾಡಿನ ಪರಿಸರದಲ್ಲಿ ಮೂಡಿಬಂದ ಕಥೆಯಾಗಿದೆ. ಕಥೆಯ ಆರಂಭ 'ಅಬ್ಬರಿಸಿ ಹಸಿ ಹಸಿದು ಬೆಟ್ಟದ ಕಿಬ್ಬಿಯೊಳು ತಾನಿದ್ದನು' ಎಂಬ ಗೋವಿನ ಹಾಡು ಕಥೆಯೊಂದಿಗೆ ಪ್ರಾರಂಭವಾಗಿ ಮಲೆನಾಡಿನ ಮಳೆಗಾಲದ ಸಂಜೆಯ ಹೊತ್ತಿನ ಪರಿಸರದೊಂದಿಗೆ ಪ್ರಾರಂಭವಾಗುತ್ತದೆ. ಹೊರಗಡೆ ಜೋರು ಮಳೆ ಸುರಿಯುತ್ತಿತ್ತು. ನಾಲ್ಕು ದಿನಗಳ ಹಿಂದೆ ಏಳು ಗಂಟೆ ಸಮಯದಲ್ಲಿ ಆರಂಭವಾದ ಮಳೆ ಒಂದೇ ಸಮ ಇನ್ನೂ ಬೀಳುತ್ತಲೇ ಇತ್ತು. ಸದ್ಯಕ್ಕೆ ನಿಲ್ಲುವ ಸೂಚನೆಯೂ ಇರಲಿಲ್ಲ. ಎಂದಿಗಿಂತ ಮೊದಲೇ ಮಲೆನಾಡಿನ ಮಳೆಗಾಲದ ಸಂಜೆ ಏಳರ ಸಮಯದಲ್ಲಿ ಜಿಟಿ ಜಿಟಿ ಮಳೆಯ ವರ್ಣನೆಯೊಂದಿಗೆ ಕಥೆ ಬೆಳೆಯುತ್ತ ಹೋಗುತ್ತದೆ. ಹೀಗೆ ಅನೇಕ ಪ್ರಸಂಗಗಳನ್ನು ಹೇಳುತ್ತಾ ಗೋವಿನ ಹಾಡಿನೊಂದಿಗೆ ಕಥೆ ಮುಗಿಯುತ್ತದೆ. ಇಲ್ಲಿ ತೇಜಸ್ವಿಯವರು ಪ್ರಕೃತಿಯ (ಭೌತಿಕ ಪರಿಸರ) ಬಗ್ಗೆ ಮನುಷ್ಯನಲ್ಲಿ ಒಳಗೊಂಡಿರುವ ಭಯದ ಪರಿಸರದ ಭಾವನೆಗಳನ್ನು ಈ ಕತೆಯಲ್ಲಿ ಸರಳ ಸುಂದರವಾಗಿ ಮೂಡಿಸಿದ್ದಾರೆ. ಇದು ತೇಜಸ್ವಿಯವರ ಪರಿಸರ ಪ್ರಜ್ಞೆಯ ಕಾಳಜಿಯನ್ನು ತೋರಿಸುತ್ತದೆ.

'ಅಬಚೂರಿನ ಪೋಸ್ಟಾಫೀಸು' ಕತೆಯಲ್ಲಿ ಲೇಖಕರು ಸಾಮಾಜಿಕ ಪರಿಸರದ ಪ್ರಜ್ಞೆ ಇಲ್ಲದೆ ವ್ಯಕ್ತಿ ಸಮೂಹದೊಳಗೆ ಬದುಕಲು ತುಂಬಾ ಕಷ್ಟವಾಗುತ್ತದೆ ಎಂಬ ಸಂದೇಶದೊಂದಿಗೆ ಈ ಕತೆ ಬೆಳೆದುಬಂದಿದೆ. ಈ ಕಥೆಯ ಅಬಚೂರಿನ ಪೋಸ್ಟ್ ಮಾಸ್ಟರ್ ಬೋಬಣ್ಣನಿಗೆ ಊರಿನ ಜನರಿಗೆ ಬಂದ ಪತ್ರ ಕದ್ದು ಓದುವ ಅಭ್ಯಾಸ.

ಹಾಗೇ ಓದಲು ಹೋಗಿ ಆದ ಎಡವಟ್ಟು ಇನ್ನಿಲ್ಲದ ಫಜೀತಿಗೆ ಅವನನ್ನು ತಳ್ಳಿ ಅವನನ್ನು ಊರೇ ಬಿಡಬೇಕಾದ ಸ್ಥಿತಿಗೆ ತಂದ ಕಥೆ. ಬೋಬಣ್ಣ ಅಲ್ಲಿನ ಪರಿಸರಕ್ಕೆ ಬಲಿಪಶುವಾಗುತ್ತಾನೆ. ಅಲ್ಲಿನ ಸಮಾಜದ ಬಗ್ಗೆ, ಪರಿಸರದ ಬಗ್ಗೆ ತೀವ್ರವಾದ ವಿಷಾದ, ಕಥೆಯ ನಾಯಕ ಬೋಬಣ್ಣನ ಮನದಾಳದಲ್ಲಿಯೂ ನೆಲೆಗಟ್ಟಿ ನಿಲ್ಲುತ್ತದೆ. ಒಟ್ಟಾರೆಯಾಗಿ ಒಬ್ಬ ವ್ಯಕ್ತಿ ಸಮಾಜದಲ್ಲಿ ಬದುಕಬೇಕಾದರೆ ಸಾಮಾಜಿಕ ಪರಿಸರ ಪ್ರಜ್ಞೆ ಬಹಳ ಅವಶ್ಯಕವೆಂಬುದನ್ನು ಈ ಕಥೆ ತಿಳಿಸುತ್ತದೆ.

ತೇಜಸ್ವೀಯವರ ಕಥೆಗಳಲ್ಲಿ ಪ್ರೇಮ, ವಿವಾಹ, ಸೃಷ್ಟಿ, ಸ್ವಾತಂತ್ರ್ಯ, ಧರ್ಮ, ಸಮಾಜ, ವ್ಯಕ್ತಿ, ಪರಿಸರ, ತತ್ವ, ಜೀವನ ಮುಂತಾದ ಪರಿಕಲ್ಪನೆಗಳು ಅವರದ್ದೇ ಆದ ವ್ಯಕ್ತಿ ವಿಶಿಷ್ಟವಾದ ಸಿದ್ಧಾಂತಗಳ ನೆಲೆಯಿಂದ ಮೂಡಿಬಂದವುಗಳಾಗಿವೆ.

ಹೀಗೆ ತೇಜಸ್ವಿಯವರ ಬರಹಗಳಲ್ಲಿ ಪರಿಸರದ ಅತೀ ಚಿಕ್ಕ ಚಿಕ್ಕ ಘಟನೆಗಳು ತುಂಬಾ ಗಂಭೀರವಾಗಿ ಪ್ರಸ್ತಾಪವಾಗುತ್ತವೆ. ಇಂದಿನ ಮನುಕುಲಕ್ಕೆ ತೀರಾ ಅಗತ್ಯವಾಗಿವೆ. ಕೇವಲ ಓದಿಗೆ ಮಾತ್ರ ಸೀಮಿತಗೊಳಿಸದೆ ನಮ್ಮೊಳಗೊಂದು ಜಾಗೃತ ಪ್ರಜ್ಞೆಯನ್ನು ಪ್ರಚೋದನೆಗೊಳಿಸುತ್ತವೆ. ಇದರ ಮೂಲಕ ಮತ್ತೆ ಮಾನವ ಹಿಮ್ಮುಖ ಚಲನೆ ಸಾಧಿಸಿ ಅಳಿದ ಸಂತತಿಗಳನ್ನು ಬಿಟ್ಟು ಇರುವ ಪ್ರಾಣಿ ಸಂತತಿಗಳನ್ನು ಹಾಗೆಯೇ ಉಳಿಸಿಕೊಂಡು ಹೋಗುವ ಮಾನಸಿಕ ಜವಾಬ್ದಾರಿ ಹೊಂದಬೇಕಾಗಿದೆ ಎಂಬ ಜೀವಂತ ಸತ್ಯವನ್ನು ನಿರೂಪಿಸುತ್ತವೆ.

ಮಾನವನು ತಾನು ಬದುಕುತ್ತಿರುವ ಪರಿಸರವನ್ನು ವಿನಾಶದ ಅಂಚಿಗೆ ತಲುಪಿಸುತ್ತಿದ್ದಾನೆ. ಕಾರಣ, ಸೃಷ್ಟಿಯಲ್ಲಿ ಅನೇಕ ಜೀವಿಗಳಲ್ಲಿ ಮಾನವನು ಪ್ರಕೃತಿಗೆ ವಿರುದ್ಧವಾದ ರೀತಿಯಲ್ಲಿ ಬದುಕು ಕಟ್ಟಿಕೊಳ್ಳುತ್ತಿದ್ದಾನೆ. ಅಲ್ಲದೆ ಸೃಷ್ಟಿಯಲ್ಲಿ ತನ್ನ ಅಸ್ತಿತ್ವವೇನು ಎಂಬುದನ್ನು ಮರೆತು ತನ್ನ ಮೂಲಕ ಕಾರಣವಾದ ಅಂಶಗಳ ಜೊತೆಗೆ ಅನುಸಂಧಾನ ನಡೆಸುವ ಪ್ರಕ್ರಿಯೆಯಿಂದ ದೂರ ಸರಿದಿದ್ದಾನೆ. ಅರಿವಿಲ್ಲದೆ ಬದುಕುತ್ತಿದ್ದಾನೆ.

## ಪರಾಮರ್ಶನ ಗ್ರಂಥಗಳು:

1. ಕರೀಗೌಡ ಬೀಚನಹಳ್ಳಿ, (2019), ಕೆ.ಪಿ. ಪೂರ್ಣಚಂದ್ರ ತೇಜಸ್ವಿ: ಬದುಕು-ಬರಹ, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
2. ಮಹೇಶರಯ್ಯ ಎಚ್.ಎಂ., (2002), ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
3. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (2012), ಹುಲಿಯೂರಿನ ಸರಹದ್ದು, ಪುಸ್ತಕ ಪ್ರಕಾಶನ, ಮೈಸೂರು.
4. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (2012), ಲಿಂಗಬಂದ ಕಥೆ, ಪುಸ್ತಕ ಪ್ರಕಾಶನ, ಮೈಸೂರು.
5. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1980), ಕರ್ವಾಲೋ, ಪುಸ್ತಕ ಪ್ರಕಾಶನ, ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.